KACN010016892025

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ

ದಿನಾಂಕ 18ನೇ ಮಾಹೆ ಸೆಪ್ಟೆಂಬರ್ 2025

**ಉಪಸ್ಥಿತರುಃ** **ಶ್ರೀಮತಿ ಪ್ರಭಾವತಿ ಜಿ.**

**ಎಲ್ ಎಲ್ ಎಂ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಚಾಮರಾಜನಗರ.**

ಕ್ರಿಮಿನಲ್ ಮಿಸ್ ನಂ. 353/2025

ಅರ್ಜಿದಾರರುಃ ಚರಣ್ ಬಿ. ಎಸ್ (ಎ–1)
ಬಿನ್ ಶಿವಪಾದಪ್ಪ
ವಯಸ್ಸು ಸುಮಾರು 27 ವರ್ಷ,
ವಾಸ: ಲಿಂಗಾಯತರ ಬೀದಿ, ಬದನಗುಪ್ಪೆ ಗ್ರಾಮ,
ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

(ಪರವಾಗಿ ಶ್ರೀ ಜಿ.ಎಸ್.ಕೆ.,ವಕೀಲರು)

ವಿರುದ್ಧ

ಎದುರುದಾರರುಃ ಸರ್ಕಾರದ ಪರವಾಗಿ,
ಗ್ರಾಮಾಂತರ ಪೊಲೀಸ್ ಠಾಣೆ
ಚಾಮರಾಜನಗರ.

(ಪರವಾಗಿ ಸರ್ಕಾರಿ ಅಭಿಯೋಜಕರು)

## ಆದೇಶ

ಅರ್ಜಿದಾರರು ಸನ್ನಿಧಿ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 ಕಲಂ 482 ರಡಿಯಲ್ಲಿ ಅರ್ಜಿಯನ್ನು

ಸಲ್ಲಿಸಿದ್ದು ಇರುತ್ತದೆ. ಅರ್ಜಿದಾರ ವಿರುದ್ಧ ಎದುರುದಾರರು ಭಾರತೀಯ ದಂಡ ಸಂಹಿತೆ ಕಲಂ 191, 417, 419, 420, 468, 471 ಮತ್ತು ಎಸ್.ಸಿ/ಎಸ್.ಟಿ [ಪಿಓಎ] ಕಾಯ್ದೆ 1989 ಕಲಂ 3(1)(f) ಅಡಿಯಲ್ಲಿ ರಅಡಿಯಲ್ಲಿ ಗುನ್ನಾ ಸಂಖ್ಯೆ 167/2025 ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

**2. ಕೇಸಿನ ವಿಧ್ಯಮಾನಗಳ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ**

ದಿನಾಂಕ 18.08.2025 ರಂದು ಮದ್ಯಾಹ್ನ 12.30 ಗಂಟೆ ಸಮಯದಲ್ಲಿ ಪಿರ್ಯಾದಿಯವರಾದ ಮಹದೇವಸ್ವಾಮಿ ಎಂ. ಎಂಬುವವರು ಠಾಣೆಗೆ ಹಾಜರಾಗಿ ಒಂದು ಕಂಪ್ಯೂಟರ್ ಮುದ್ರಿತ ದೂರನ್ನು ಸ್ವೀಕರಿಸಿದ್ದು ಸದರಿ ದೂರಿನಂತೆ ಆದಾಗಿ ನಾನು ಪರಿಶಿಷ್ಟ ಜಾತಿಗೆ ಸೇರಿದವನಾಗಿರುತ್ತೇನೆ. ನಾನು ನನ್ನ ಹೆಂಡತಿ ನನ್ನ ಅಣ್ಣ ಹಾಗೂ ನನ್ನ ಅಣ್ಣನ ಹೆಂಡತಿ ಮತ್ತು ನನ್ನ ತಂದೆ-ತಾಯಿ ಒಟ್ಟಾಗಿ ವಾಸವಾಗಿದ್ದು, ಚಾಮರಾಜನಗರ ತಾಲ್ಲೋಕು ಕಸಬಾ ಹೋಬಳಿ, ಬದನಗುಪ್ಪೆ ಗ್ರಾಮಕ್ಕೆ ಸೇರಿದ ಸರ್ವೆ.ನಂ.504 ರಲ್ಲಿ 4 ಎಕರೆ 27 ಗುಂಟೆ ಜಮೀನು ನಮಗೆ ಸೇರಿದ. ಪಿತ್ರಾರ್ಜಿತ ಜಮೀನಾಗಿರುತ್ತದೆ. ಸದರಿ ಸ್ವತ್ತು ನಮ್ಮ ಮುತ್ತಾತನಾದ ಸುಬ್ಬ ಬಿನ್ ಕುನ್ನಸುಬ್ಬರ ಹೆಸರಿಗೆ ಖಾತೆಯಾಗಿರುತ್ತದೆ. ಡಿ.ಆರ್. ನಂ.53/1926-27 ರಂತೆ ಪರಿಶಿಷ್ಟ ಜಾತಿಯವರಾದ ನಮಗೆ ನಮ್ಮ ಮುತ್ತಾತನಾದ ಸುಬ್ಬ ಬಿನ್ ಕುನ್ನಸುಬ್ಬರ ಹೆಸರಿಗೆ ಸರ್ಕಾರ ಮಂಜೂರು ಮಾಡಿರುತ್ತದೆ. ಸದರಿ ಸ್ವತ್ತಿನ ನಮ್ಮ ಮುತ್ತಾತನು ಮರಣಾ ನಂತರ ನಮ್ಮ ತಾತನಾದ ಚಿಕ್ಕದೇವಯ್ಯ ಅವರ ಮರಣಾ ನಂತರ ನಮ್ಮ ತಂದೆ ಮಹದೇವಯ್ಯರವರು ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು ವ್ಯವಸಾಯ ಮಾಡಿಕೊಂಡಿ ಬಂದಿರುತ್ತಾರೆ. ಸದರಿ ಸ್ವತ್ತು ಕೆ.ಐ.ಎ.ಡಿ.ಬಿ ಗೆ ಭೂಸ್ವಾಧೀನವಾಗಿದ್ದು, ಭೂಸ್ವಾಧೀನವಾಗುವವೆಗೂ ನಮ್ಮ ತಂದೆಯೇ ಸ್ವಾಧೀನಾನುಭೋಗದಲ್ಲಿದ್ದುಕೊಂಡು ಬಂದಿರುತ್ತಾರೆ. ಸದರಿ ಸ್ವತ್ತು ಪಿ.ಟಿ.ಸಿ.ಎಲ್ ಕಾಯ್ದೆಗೆ ಒಳಪಡುತ್ತಿದ್ದು ಸದರಿ ಸ್ವತ್ತನ್ನು ಯಾರ ಕೂಡ ಕ್ರಯಕ್ಕೆ ಭೋಗ್ಯಕ್ಕೆ ಇತ್ಯಾದಿ ಪರಬಾರೆ ಮಾಡುವಂತಿಲ್ಲ, ಹೀಗಿದ್ದರೂ ದಿನಾಂಕ:10.05.2022 ರಲ್ಲಿ ಬದನಗುಪ್ಪೆ ಗ್ರಾಮದ ಶಿವಪಾದಪ್ಪ ಎಂಬುವವರು ನಮ್ಮ ಮಗನಾದ ಚರಣ್ ಬಿ.ಎಸ್, ರವರ ಹೆಸರಿಗೆ ಅಕ್ರಮವಾಗಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತಾರೆ. ನಮ್ಮ ಮುತ್ತಾತನಾದ ಸುಬ್ಬ ಬಿನ್ ಕುನ್ನಸುಬ್ಬಪ್ಪರವರ ಹೆಸರಿಗೆ ಸದರಿ ಸ್ವತ್ತು ಮಂಜೂರಾಗಿದ್ದು, ನಮಗೆ ಪಿತ್ರಾರ್ಜಿತ ಸ್ವತ್ತಾಗದ್ದು, ಸದರಿ ನಮ್ಮ ಮುತ್ತಾತನಾದ ಸುಬ್ಬ ಬಿನ್ ಕುನ್ನಸುಬ್ಬಪ್ಪ ಎಂಬುವವರ ಹೆಸರಿನಲ್ಲಿ ದಾಖಲಾತಿಗಳು ಇರುತ್ತವೆ. ಸದರಿಯವರು ದಿನಾಂಕ:20.11.1970 ರಲ್ಲಿ ಮರಣ ಹೊಂದಿರುತ್ತಾರೆ. ಆದರೆ ಸದರಿ ವಿಷಯ

ಗೊತ್ತಿದ್ದರೂ ಸಹ ಪ್ರಸ್ತುತ ಸದರಿ ಸ್ವತ್ತು ಕೆ.ಐ.ಎ.ಡಿ.ಬಿ ಗೆ ಭೂಸ್ವಾದೀನವಾಗಿದ್ದು ಹೆಚ್ಚಿನ ಪರಿಹಾರ ನಿಗಧಿಯಾಗಿರುವುದರಿಂದ ಇದನ್ನು ಮೊದಲೇ ತಿಳಿದಿದ್ದ ಬದನಗುಪ್ಪೆ ಗ್ರಾಮದ ಶಿವಪಾದಪ್ಪರವರು ಹೇಗಾದರೂ ಮಾಡಿ ನಮ್ಮ ಸ್ವತ್ತನ್ನು ಹೊಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ನಮ್ಮ ಆಸ್ತಿಗೆ ಸಂಬಂಧಪಟ್ಟ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೋಕು ಪಿ.ಮರಳ್ಳಿ ಗ್ರಾಮದ 75 ವರ್ಷ ವಯಸ್ಸಿನ ಲೇ.ಪುಟ್ಟಯ್ಯುನ ಮಗ ಸುಬ್ಬಯ್ಯು ಎಂಬ ಯಾವನೋ ಅನಾಮಿಕ ಒಬ್ಬ ವ್ಯಕ್ತಿಯನ್ನು ಶಿವಪಾದಪ್ಪನು ಕರೆದುಕೊಂಡು ಬಂದು ಆತನ ಮೂಲ ಆದಾರ್ ಕಾರ್ಡ್‌ನಲ್ಲಿ ಸುಬ್ಬಯ್ಯು ಬಿನ್ ಲೇ.ಪುಟ್ಟಯ್ಯು (ಆಧಾರ್ ಸಂಖ್ಯೆ:481884605172) ಎಂಬ ಹೆಸರನ್ನು ಎಡಿಟ್ ಮಾಡಿ ಸುಬ್ಬಯ್ಯು ಎಂಬುದನ್ನು ಸುಬ್ಬ ಎಂದು ಎಡಿಟ್ ಮಾಡಿ ಸುಬ್ಬಯ್ಯುನ ತಂದೆ ಹೆಸರು ಇರುವ ಹೆಸರಿನ ಜಾಗದಲ್ಲಿ ಕುನ್ನಸುಬ್ಬ ಎಂದು ಎಡಿಟ್ ಮಾಡಿ ಸುಬ್ಬಯ್ಯು ಬಿನ್ ಪುಟ್ಟಯ್ಯು ಎಂಬ ಹೆಸರನ್ನು ಆರ್.ಟಿ.ಸಿ ಗೆ ಹೋಲಿಕೆಯಾಗುವ ಹಾಗೆ ಸುಬ್ಬ ಬಿನ್ ಕುನ್ನಸುಬ್ಬ ಎಂದು ಬೇರೊಂದು ಆದಾರ್ ಕಾರ್ಡ್‌ನ್ನು ಸಹ ಎಡಿಟ್ ಮಾಡಿಸಿ ಸೃಷ್ಟಿಮಾಡಿ ಆ ಸೃಷ್ಟಿ ಮಾಡಿರುವ ಅಧಾರ್ ಕಾರ್ಡ್ ಸದರಿ ಪಿ.ಮರಳ್ಳಿ ಗ್ರಾಮದ ಸೋಮಣ್ಣ @ ಕುಳ್ಳ ಬಿನ್ ಮಹದೇವಯ್ಯು ಎಂಬುವವರ ಮೊಬೈಲ್ ನಂಬರ್ ಆದ 8722059984ನ್ನು ಸಹ ಸೇರ್ಪಡೆ ಮಾಡಿ ಸುಬ್ಬಯ್ಯು ಬಿನ್ ಪುಟ್ಟಯ್ಯು ಎಂದು ಹೆಸರನ್ನು ಸೃಷ್ಟಿ ಮಾಡಿದ ಆದಾರ್ ಕಾರ್ಡ್‌ನಲ್ಲಿ ಎಡಿಟ್ ಮಾಡಿ ಸೇರಿಸಿ ಈ ಕಾರ್ಡ್ ನಲ್ಲಿ ಮೊಬೈಲ್ ನಂಬರನ್ನು ಸಿಸ್ಟಂನಲ್ಲಿ ಒತ್ತಿದರೆ ಸೋಮಣ್ಣನಿಗೆ ಒ.ಟಿ.ಪಿ ಬರುವ ಹಾಗೆ ಮಾಡಿ ಈ ಎಲ್ಲವನ್ನು ಸೃಷ್ಟಿ ಮಾಡಿ ನಮ್ಮ ಮುತ್ತಾತನದಾದ ಸುಬ್ಬ ಬಿನ್ ಕುನ್ನಸುಬ್ಬರವರು 1970 ರಲ್ಲಿ ಸತ್ತು ಹೋಗಿದ್ದರೂ ಸಹ ದಿನಾಂಕ:10.05.2022 ರಲ್ಲಿ ಸದರಿ ನಮ್ಮ ಮುತ್ತಾತನಾದ ಸುಬ್ಬ ಬಿನ್ ಕುನ್ನಸುಬ್ಬನ ಜಾಗಕ್ಕೆ ಪಿ.ಮರಳ್ಳಿ ಗ್ರಾಮದ ಸುಬ್ಬಯ್ಯು ಬಿನ್ ಪುಟ್ಟಯ್ಯುನನ್ನು ಕೂರಿಸಿ ಚಾಮರಾಜನಗರ ಸಬ್ ರಿಜಿಸ್ಟರ್ ಕಛೇರಿಯಲ್ಲಿ ಅಕ್ರಮವಾಗಿ ಪೋಟೋ ತೆಗೆಸಿ ಸದರಿ ಸುಬ್ಬಯ್ಯು ಬಿನ್ ಪುಟ್ಟಯ್ಯುರವರು ಶಿವಪಾದಪ್ಪನ ಮಗನಾದ ಚರಣ್.ಬಿ.ಎಸ್ ರವರ ಹೆಸರಿಗೆ ಸದರಿ ಸ್ವತ್ತನ್ನು ಕ್ರಯ ಬರೆದುಕೊಟ್ಟ ಹಾಗೆ ನಕಲಿಯಾಗಿ ಕ್ರಯ ಪತ್ರವನ್ನು ಬರೆಸಿಕೊಂಡು ಸದರಿ ಚಾಮರಾಜನಗರ ತಾಲ್ಲೋಕು ಬದನಗುಪ್ಪೆ ಗ್ರಾಮದ ಶಿವಪಾದಪ್ಪನು ತನ್ನ ಮಗನಾದ ಚರಣ್ ಬಿ.ಎಸ್.ರವರ ಹೆಸರಿಗೆ ಕಾನೂನು ಬಾಹಿರವಾಗಿ ಶಿವಪಾದಪ್ಪನ ಮಗನಾದ ಚರಣ್.ಬಿ.ಎಸ್ ರವರು ಪರಸ್ಪರ ಶಾಮೀಲಾಗಿ ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತಾರೆ. ಸದರಿ ಕ್ರಯ ಪತ್ರವನ್ನು ಮೇಲ್ಕಂಡ ಶಿವಪಾದಪ್ಪನ ಮಗನಾದ ಚರಣ್.ಬಿ.ಎಸ್ ರವರು ಶಾಮೀಲಾಗಿ ಸದರಿಯವರಿಗೆ ಅನುಕೂಲ

ಮಾಡಿಕೊಡುವ ದೃಷ್ಟಿಯಿಂದ ಶಿವಪಾದಪ್ಪರವರ ಗ್ರಾಮದವರೇ ಆದ ಮಿತ್ರೇಶ್ ಬಿನ್ ಲೇಟ್ ನಾಗಣ್ಣ ಜಿಲ್ಲೆ ಪತ್ರ ಬರಹಗಾರರು ಲೈಸೆನ್ಸ್ ನಂ.41/2011-12 ಮೊ.ಸಂ.9141801772 ರವರು ಸದರಿ ಕ್ರಯ ಪತ್ರವು ನಕಲಿ ಮತ್ತು ಸೃಷ್ಟಿ ಎಂಬ ವಿಚಾರವನ್ನು ಸಂಪೂರ್ಣವಾಗಿ ಅರಿತುಕೊಂಡಿದ್ದರೂ ಸಹ ಸದರಿ ಕ್ರಯಪತ್ರವನ್ನು ಸೃಷ್ಟಿ ಮಾಡುವಲ್ಲಿ ಸದರಿಯವರಿಗೆ ಸಹಕರಿಸಿ ನಮ್ಮಗಳಿಗೆ ಮೋಸ ಮಾಡಿರುತ್ತಾರೆ. ಸದರಿ ಕ್ರಯಪತ್ರದ ಆಧಾರದ ಮೇಲೆ ತಾಲ್ಲೋಕು ಕಛೇರಿ ಚಾಮರಾಜನಗರ ಇಲ್ಲಿಗೆ ಖಾತೆ ಮಾಡುವಂತೆ ಅರ್ಜಿ ಸಲ್ಲಿಸಿದಾಗ ನಾನು ಸದರಿ ಸ್ವತ್ತು ನಮಗೆ ಪಿತ್ರಾರ್ಜಿತ ಸ್ವತ್ತು ಚರಣ್ ರವರ ಹೆಸರಿಗೆ ಹೇಗೆ ಕ್ರಯವಾಗಲು ಸಾಧ್ಯ ನಮ್ಮ ಮುತ್ತಾತ ಸುಬ್ಬ ಬಿನ್ ಕುನ್ನಸುಬ್ಬರವರು ದಿನಾಂಕ:20.11.1970ರಲ್ಲಿ ಮರಣ ಹೊಂದಿದ್ದಾರೆ. ದಿ:10.05.2022 ರಲ್ಲಿ ನಿಮಗೆ ಯಾರೂ ಕ್ರಮ ಮಾಡಲು ಸಾಧ್ಯವಿಲ್ಲ, ಇದು ಸೃಷ್ಟಿ ಮಾಡಿರುವ ಅಕ್ರಮ ಕ್ರಯ ಪತ್ರ ಆದ ಕಾರಣ ಚರಣ್ ರವರ ಹೆಸರಿಗೆ ಖಾತೆ ಮಾಡಬಾರದೆಂದು ನಮ್ಮ ಅಣ್ಣನೊಡನೆ ಚರ್ಚಿಸಿ ನಮ್ಮ ಅಣ್ಣ ತಕರಾರನ್ನು ಸಲ್ಲಿಸಿದಾಗ ಚಾಮರಾಜನಗರ ತಹಶೀಲ್ದಾರ್ ರವರ ಚರಣ್.ಬಿ.ಎಸ್ ಬಿನ್ ಶಿವಪಾದಪ್ಪರವರು ಪಿ.ಮರಳ್ಳಿ ಗ್ರಾಮದ ಪುಟ್ಟಯ್ಯನ ಮಗ ಸುಬ್ಬಯ್ಯ ಎಂಬು 3ನೇ ವ್ಯಕ್ತಿಯನ್ನು ಕರೆದುಕೊಂಡು ಬಂದು ಫೇಕ್ ಮಾಡಿರುವುದು ಸುಬ್ಬಯ್ಯ ಬಿನ್ ಪುಟ್ಟಯ್ಯರವರ ನೈಜವಾದ ಆದಾರ್ ಕಾರ್ಡ್ ಹಾಗೂ ನೈಜವಾದ ಪಡಿತರ ಚೀಟಿ ಮತ್ತು ಸೃಷ್ಟಿ ಮಾಡಿರುವ ಆಧಾರ್ ಕಾರ್ಡ್ ಮತ್ತು ದಾಖಲೆಗಳಲ್ಲಿ ಸುಬ್ಬಯ್ಯ ಬಿನ್ ಪುಟ್ಟಯ್ಯರವರ ಫೋಟೋ ಸಹಿತ ದಾಖಲೆಗಳನ್ನು ಪರಿಶೀಲಿಸಿ ಅಕ್ರಮವಾಗಿ ಕಾನೂನು ಬಾಹಿರವಾಗಿ ಕ್ರಯಪತ್ರ ಮಾಡಿರುವುದು ಕಂಡು ಬಂದಿರುತ್ತದೆ. ಆದುದರಿಂದ ಖಾತೆ ಮಾಡಲಾಗದು ಎಂದು ಖಾತೆಯನ್ನು ಸ್ಥಗಿತಗೊಳಿಸಿರುತ್ತಾರೆ ಮತ್ತು ಸದರಿ ಸೃಷ್ಟಿ ಮಾಡಿರುವ ಅಕ್ರಮ ಕ್ರಯ ಪತ್ರಕ್ಕೆ ನಮ್ಮ ಗ್ರಾಮದ ಲೇ.ನಂಜುಂಡಶೆಟ್ಟಿರವರ ಮಗನಾದ ರಂಗಶೆಟ್ಟಿ ಮತ್ತು ಇವರ ಮಗನಾದ ಶಿವಕುಮಾರ, ದೊಡ್ಡಮಾದಶೆಟ್ಟಿ ಮಗನಾದ ಸಿದ್ದರಾಜು, ರಾಚಶೆಟ್ಟಿ ಮತ್ತು ಇವರ ಮಗನಾದ ರಾಮು ಚಿಕ್ಕಮಾದಶೆಟ್ಟಿಯ ಮಗನಾದ ನಾಗೇಂದ್ರರವರುಗಳು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಹೀಗಾಗಿ ಇವರುಗಳು ಮತ್ತು ಶಿವಪಾದಪ್ಪ ಮತ್ತು ಚರಣ್ ರವರು ನೀಡಿರುವ ಭೂಮಿಯನ್ನು ಹಾಗೂ ಸದರಿ ಭೂಮಿ ಕೆ.ಐ.ಎ.ಡಿ.ಪಿ ಗೆ ಭೂಸ್ವಾಧೀನವಾಗಿರುವುದರಿಂದ ಪರಿಹಾರದ ಹಣವನ್ನು ಕಬಳಿಸುವ ದುರುದ್ದೇಶದಿಂದ ಮೇಲ್ಕಂಡಂತೆ ಕ್ರಯಪತ್ರವನ್ನು ಸೃಷ್ಟಿ ಮಾಡಿ ನಮಗೆ ವಂಚನೆ ಮಾಡಿ ಮೋಸ ಮಾಡಿರುತ್ತಾರೆ. ಸದರಿ ಶಿವಪಾದಪ್ಪ ಮತ್ತು ಚರಣ್ ರವರು ಆರ್ಥಿಕವಾಗಿ ಬಲಾಡ್ಯರಾಗಿದ್ದು,

ಎಲ್ಲಾ ಇಲಾಖೆಗಳಲ್ಲಿಯೂ ಅಧಿಕಾರಿಗಳನ್ನು ತಮ್ಮ ಮಾತು ಕೇಳುವಂತೆ ಮಾಡಿಕೊಂಡು ಬಡವರಾದ ನಮಗೆ ನ್ಯಾಯ ದೊರಕದಂತೆ ನಮ್ಮ ಜಮೀನಿನ ಪರಿಹಾರ ನಮಗೆ ಸಿಗದಂತೆ ಮಾಡಿ ನಮ್ಮ ಆಸ್ತಿಯ ಪರಿಹಾರದ ಹಣವನ್ನು ಕೆ.ಐ.ಎ.ಡಿ.ಬಿ ಯಿಂದ ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ಸದರಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿ ನಮಗೆ ಮೋಸ ಹಾಗೂ ವಂಚನೆ ಮಾಡಿ ಸದರಿ ಕ್ರಯ ಪತ್ರಕ್ಕೆ ಮೇಲ್ಕಂಡಂತೆ ಸಾಕ್ಷಿಗಳನ್ನು ಸಹ ಪಾಕಿಸಿಕೊಂಡಿರುತ್ತಾರೆ. ನಾನು ದಾಖಲೆಗಳನ್ನು ಪಡೆದು ನೋಡಿದಾಗ ನನ್ನ ಜಮೀನಿನ ಬಗ್ಗೆ ದಾಖಲೆ ಸೃಷ್ಟಿ ಮಾಡಿರುವುದು ತಿಳಿದು ಬಂದ ನಂತರ ಸದರಿ ಶಿವಫಾದಪ್ಪ ಮತ್ತು ಆತನ ಮಗನನ್ನು ಬೇಟಿಯಾಗಿ ಹೀಗೇಕೆ ನಮ್ಮ ಜಮೀನು ನಿಮಗೆ ಕ್ರಯವಾದಂತೆ ದಾಖಲೆಯನ್ನು ಸೃಷ್ಟಿ ಮಾಡಿದ್ದೀರಿ ಸದರಿ ಸುಳ್ಳು ಕ್ರಯ ಪತ್ರದ ದಾಖಲೆಯನ್ನು ರದ್ದುಪಡಿಸಿ ಎಂದು ಕೇಳಿಕೊಂಡಾಗ ಶಿವಪಾದಪ್ಪ ಮತ್ತು ಆತನ ಮಗನು ಈ ಜಮೀನಿನ ವಿಚಾರವಾಗಿ ನೀನು ವಿಚಾರಿಸಲು ಬಂದರೆ ನಿನ್ನನ್ನು ಹಾಗೂ ನಿನ್ನ ಕುಟುಂಬದವರನ್ನು ಮುಗಿಸದೇ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಆದುದರಿಂದ ಪರಿಶಿಷ್ಟ ಜಾತಿಯವರಾದ ನಮಗೆ ಸರ್ಕಾರದಿಂದ ಮಂಜೂರಾಗಿ ಪಿ.ಟಿ.ಸಿ.ಎಲ್ ಕಾಯ್ದೆಗೆ ಒಳಪಡುವ ನಮ್ಮ ಮೇಲ್ಕಂಡ ಸರ್ವೆ ನಂ.504 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 27 ಗುಂಟೆ ಜಮೀನನ್ನು ಕಬಳಿಸಿಕೊಳ್ಳುವ ಉದ್ದೇಶದಿಂದ ಪ್ರಯತ್ನಪಟ್ಟಿರುವ ಮೇಲ್ಕಂಡವರುಗಳು ಪರಸ್ಪರ ಶಾಮೀಲಾಗಿ ಸುಳ್ಳು ಕ್ರಯಪತ್ರವನ್ನು ಕಾನೂನು ಬಾಹಿರವಾಗಿ ಸೃಷ್ಟಿ ಮಾಡಿ ನಮಗೆ ಮೋಸ ವಂಚನೆ ಮಾಡಿರುವ ಮೇಲ್ಕಂಡ ಶಿವಪಾದಪ್ಪ, ಚರಣ್.ಬಿ.ಎಸ್. ಹಾಗೂ ಇದಕ್ಕೆ ಸಾಕ್ಷಿಯಾಗಿ ಸುಳ್ಳು ಸಾಕ್ಷಿ ಹಾಕಿರುವ ರಂಗಶೆಟ್ಟಿ ಮತ್ತು ಇವರ ಮಗಣಾದ ಶಿವಕುಮಾರ, ದೊಡ್ಡಮಾದಶೆಟ್ಟಿ ಮಗನಾದ ಸಿದ್ದರಾಜು, ರಾಚಶೆಟ್ಟಿ, ಇವರು ಮಗ ರಾಮು, ಚಿಕ್ಕಮಾದಶೆಟ್ಟಿ ಮಗ ನಾಗೇಂದ್ರ ರವರುಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ನಮಗೆ ನ್ಯಾಯಾ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಆದ್ದರಿಂದ ಸದರಿ ದೂರಿನ ಮೇರೆಗೆ ಆರೋಪಿತರ ವಿರುದ್ಧ ಚಾಮರಾಜನಗರ ಗ್ರಾಮಾಂತರ ಠಾಣಾ ಪೊಲೀಸರು ಸದರಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

3. ಈ ಪ್ರಕರಣದಲ್ಲಿ ಅರ್ಜಿದಾರರ ಪರವಾಗಿ ವಾದವನ್ನು ಮಂಡಿಸುತ್ತಾ ಪಿರ್ಯಾದುದಾರರು ಅರ್ಜಿದಾರರ ಮೇಲೆ ಆರೋಪಿಸಿರುವಂತಹ ಆರೋಪಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದಂತಹ ಸಂದರ್ಭದಲ್ಲಿ ಅರ್ಜಿದಾರರಿಗೂ ಆರೋಪಿಸಿರುವಂತಹ ಆರೋಪಗಳಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ

ಎಂಬುದು ಸ್ಪಷ್ಟವಾಗಿ ಪಿರ್ಯಾದಿನಿಂದಲೇ ಎದ್ದು ಕಂಡುಬರುತ್ತದೆ. ಅರ್ಜಿದಾರರು ಮುಗ್ಧರಾಗಿದ್ದು ಕಾನೂನು ಪರಿಪಾಲಿಸುವ ಸತ್ವಜೆಯಾಗಿ ಸಮಾಜದಲ್ಲಿ ಬಾಳ್ವೆ ಮಾಡುತ್ತಿರುತ್ತಾರೆ. ಅರ್ಜಿದಾರರ ಮೇಲೆ ಆರೋಪಿಸಿರುವಂತಹ ಅಪರಾಧವು ಜೀವಾವಧಿ ಶಿಕ್ಷೆ ಅಥವಾ ಮರಣ ದಂಡನೆಯನ್ನು ವಿಧಿಸುವಂತಹ ಅಪರಾಧವಾಗಿರುವುದಿಲ್ಲ. ಅರ್ಜಿದಾರರ ಮೇಲೆ ಆರೋಪಿಸಿರುವಂತಹ ಅಪರಾಧ ವಿಚಾರಣೆಯು ವಿಶೇಷ ಪ್ರಕರಣವಾದ ಕಾರಣ ಘನ ನ್ಯಾಯಾಲಯದ ವ್ಯಾಪ್ತಿಗೆ ಬರುವಂತಹ ಪ್ರಕರಣವಾಗಿರುತ್ತದೆ. ಅರ್ಜಿದಾರರು ಪಿರ್ಯಾದುದಾರರು ಆರೋಪಿಸಿರುವಂತೆ ಆರೋಪವನ್ನು ಯಾವುದೇ ಎಸಗಿರುವುದಿಲ್ಲ ಹಾಗೂ ಆರೋಪಿಸಿರುವಂತಹ ಕಲಂ ಎಸ್ಸಿ /ಎಸ್ಟಿ ದೌರ್ಜನ್ಯ ಕಾಯ್ದೆ ಕಲಂ 3(1)(f), ಭಾರತೀಯ ದಂಡ ಸಂಹಿತೆ ಕಲಂ 420 ಹಾಗೂ 468 ಹೊರತುಪಡಿಸಿ ಉಳಿದ ಕಲಂಗಳು ಜಾಮೀನಿಯವಾಗಿರುತ್ತದೆ. ಸದರಿ ಪ್ರಕರಣದಲ್ಲಿ ಪಿರ್ಯಾದುದಾರರು ವೈಯಕ್ತಿಕ ಲಾಭವನ್ನು ಪಡೆಯಲು ಈ ರೀತಿ ಜಾತಿ ನಿಂದನಾ ಕಲಂ ನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಸದರಿ ಕಾರಣ ಆರೋಪಿಸಿರುವಂತಹ ಜಾತಿ ನಿಂದನೆ ಪ್ರಕರಣವು ಸದರಿ ಅರ್ಜಿದಾರರಿಗೆ ಅನ್ವಯವಾಗುವುದಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಪಿರ್ಯಾದುದಾರರು ಅರ್ಜಿದಾರರ ವಿರುದ್ಧ ಪಿರ್ಯಾದಿನಲ್ಲಿ ಆರೋಪಿಸಿರುವಂತೆ ಚಾಮರಾಜನಗರ ತಾಲ್ಲೂಕು, ಕಸಬಾ ಹೋಬಳಿ, ಬದನಗುಪ್ಪೆ ಗ್ರಾಮದ ಸರ್ವೇ ನಂ: 504 ರಲ್ಲಿ ವಿಸ್ತೀರ್ಣ 4 ಎಕರೆ 27 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯವು ವಿಚಾರಣಾ ಹಂತದಲ್ಲಿದ್ದು, ಸದರಿ ವ್ಯಾಜ್ಯದಲ್ಲಿ ಲಾಭವನ್ನು ಪಡೆಯುವ ದುರುದ್ದೇಶದಿಂದ ಪಿರ್ಯಾದುದಾರರು ಅರ್ಜಿದಾರರ ಮೇಲೆ ಈ ರೀತಿ ಸುಳ್ಳು ಆರೋಪಗಳನ್ನು ಮಾಡಿರುತ್ತಾರೆ. ಆರೋಪಿಸಿರುವಂತಹ ಆರೋಪವು ಸಿವಿಲ್ ಸ್ವರೂಪದ್ದಾಗಿರುತ್ತದೆ. ಆದರೆ ಸದರಿ ಆರೋಪಗಳಲ್ಲಿ ಕ್ರಿಮಿನಲ್ ಆರೋಪಗಳು ಇಲ್ಲದಿರುವುದು ಪಿರ್ಯಾದುದಾರರು ಪಿರ್ಯಾದಿನಿಂದಲೇ ಎದ್ದು ಕಂಡು ಬರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಸದರಿ ಪಿರ್ಯಾದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಸದರಿ ಅರ್ಜಿದಾರರ ವಿರುದ್ಧ ಆರೋಪಿಸಿರುವಂತಹ ಯಾವುದೇ ಘಟನೆಯು ಸಹ ನಡೆದಿರುವುದಿಲ್ಲ ಎಂಬುದು ಪಿರ್ಯಾದಿನಿಂದಲೇ ಎದ್ದು ಕಂಡು ಬರುತ್ತದೆ. ಪಿರ್ಯಾದುದಾರರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಅಧಿಕಾರದ ಪ್ರಭಾವದಿಂದ ಅರ್ಜಿದಾರರ ವಿರುದ್ಧ ಈ ದೂರನ್ನು ಸೃಷ್ಟಿಸಿರುವುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಎದ್ದು ಕಂಡು ಬರುತ್ತದೆ. ಪಿರ್ಯಾದುದಾರರು ಅರ್ಜಿದಾರರಿಗೆ

ತೊಂದರೆ ನೀಡುವ ದುರುದ್ದೇಶದಿಂದ ಈ ಒಂದು ಸುಳ್ಳು ದೂರನ್ನು ಸೃಷ್ಟಿಸಿರುತ್ತಾರೆ. ಸದರಿ ಅಂಶಗಳನ್ನು ಗಮನಿಸಿದಾಗ ಪಿರ್ಯಾದುದಾರರು ಅರ್ಜಿದಾರರಿಗೆ ಈ ಒಂದು ಸುಳ್ಳು ದೂರಿನಿಂದ ಬೆದರಿಕೆ ಹಾಕಲು ಈ ಒಂದು ದೂರನ್ನು ಸೃಷ್ಟಿಸಿರುವುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಎದ್ದು ಕಂಡು ಬರುತ್ತದೆ. ಆರೋಪಿಸಿರುವಂತಹ ಯಾವುದೇ ಘಟನೆಯಲ್ಲಿಯೂ ಸಹ ಅರ್ಜಿದಾರರು ಭಾಗಿಯಾಗಿರುವುದಿಲ್ಲ. ಅರ್ಜಿದಾರರು ಭಾಗಿಯಾಗಿದ್ದಾರೆ ಎಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟ ಪ್ರತ್ಯಕ್ಷ ಸಾಕ್ಷ್ಯಾಧಾರಗಳು ಸಹ ಇರುವುದಿಲ್ಲ. ಸದರಿ ಅರ್ಜಿದಾರರಿಗೂ ಹಾಗೂ ಸಂಬಂಧಿಸಿದಂತೆ ಪ್ರಕರಣಕ್ಕೆ ಪಿರ್ಯಾದುದಾರರಿಗೂ ಯಾವುದೇ ರೀತಿಯ ಸಂಬಂಧವೂ ಸಹ ಇರುವುದಿಲ್ಲ. ಪಿರ್ಯಾದುದಾರರನ್ನು ಅರ್ಜಿದಾರರು ನಿಂದಿಸುವಂತಹ ಯಾವುದೇ ಉದ್ದೇಶಗಳು ಸಹ ಇರುವುದಿಲ್ಲ. ಸದರಿ ಪಿರ್ಯಾದುದಾರರು ಆರೋಪಿಸಿರುವಂತೆ ಅರ್ಜಿದಾರರು ಜಾತಿ ನಿಂದನೆ ಮಾಡಿರುವುದಿಲ್ಲ ಎಂಬುದು ಪಿರ್ಯಾದುದಾರರ ಪಿರ್ಯಾದಿನಿಂದಲೇ ಸ್ಪಷ್ಟವಾಗಿ ಎದ್ದು ಕಂಡು ಬರುತ್ತದೆ. ಅಲ್ಲದೇ ಪಿರ್ಯಾದುದಾರರು ಜಮೀನಿನಲ್ಲಿ ಆರೋಪಿಸಿರುವಂತಹ ಘಟನೆ ನಡೆಯಿತು ಎಂದು ತಿಳಿಸಿರುತ್ತಾರೆ. ಪಿರ್ಯಾದುದಾರರ ದೂರನ್ನು ಸೂಕ್ಷ್ಮವಾಗಿ ಗಮನಿಸಿದಾಗ ಜಾತಿ–ನಿಂದನೆ ಆರೋಪವು ಅರ್ಜಿದಾರರಿಗೆ ಅನ್ವಯವಾಗುವುದಿಲ್ಲ. ಸದರಿ ಅರ್ಜಿದಾರರ ವಿರುದ್ಧ ದೂರನ್ನು ಸೃಷ್ಟಿಸುವ ಏಕೈಕ ಉದ್ದೇಶದಿಂದ ಈ ಆರೋಪವನ್ನು ಸೃಷ್ಟಿಸಿರುತ್ತಾರೆ. ಅರ್ಜಿದಾರರನ್ನು ಎದುರುದಾರರು ಸದರಿ ಪ್ರಕರಣದಲ್ಲಿ ಬಂಧಿಸುವಂತಹ ಸಂಭವ ಇದ್ದು ಸದರಿ. ಅರ್ಜಿದಾರರು ಜಾಮೀನು ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ಗಮನಿಸಿದಾಗ ಅರ್ಜಿದಾರರ ಮೇಲೆ ಪ್ರಕರಣ ದಾಖಲಿಸಬೇಕೆಂಬ ದುರುದ್ದೇಶದಿಂದ ಅರ್ಜಿದಾರರ ವಿರುದ್ಧ ಈ ಸುಳ್ಳು ಪಿರ್ಯಾದನ್ನು ನೀಡಿರುವುದು ಮೇಲ್ನೋಟಕ್ಕೆ ಗೋಚರಿಸುತ್ತದೆ. ಎದುರುದಾರರು ಮುಂದೆ ಮಾಡುವಂತಹ ತನಿಖೆಗೆ ಅರ್ಜಿದಾರರು ಸಹಕರಿಸುತ್ತಾರೆ ಮತ್ತು ಸಂಗ್ರಹಿಸಿರುವಂತಹ ಸಾಕ್ಷಿ ಆಧಾರಗಳನ್ನು ಹಾಳು ಮಾಡುವುದಿಲ್ಲವೆಂಬ ಭರವಸೆಯನ್ನು ನೀಡುತ್ತಾರೆ. ಅರ್ಜಿದಾರರು ಘನ ನ್ಯಾಯಾಲಯವು ವಿಧಿಸುವಂತಹಎಲ್ಲಾ ಪರತ್ತುಗಳನ್ನು ಪಾಲಿಸಲು ಸಿದ್ಧರಿರುತ್ತಾರೆ ಮತ್ತು ಅರ್ಜಿದಾರರು ಪ್ರಕರಣವು ಇತ್ಯರ್ಥವಾಗುವವರೆಗೂ ವ್ಯಾಪ್ತಿ ಪ್ರದೇಶವನ್ನು ಬಿಟ್ಟು ಹೊರಗೆ ಎಲ್ಲೂ ಹೋಗುವುದಿಲ್ಲವೆಂದು ಭರವಸೆಯನ್ನು ನೀಡುತ್ತಾರೆ. ಅರ್ಜಿದಾರರು ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಬದನಗುಪ್ಪೆ ಗ್ರಾಮದ ಶಾಶ್ವತ ನಿವಾಸಿಯಾಗಿದ್ದು, ಅರ್ಜಿದಾರರು

ವೃತ್ತಿಯಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿರುತ್ತಾರೆ. ಇಡೀ ಕುಟುಂಬವು ಅರ್ಜಿದಾರರ ದುಡಿಮೆಯನ್ನು ನಂಬಿ ಜೀವನವನ್ನು ಸಾಗಿಸುತ್ತಿರುತ್ತಾರೆ. ಅರ್ಜಿದಾರರನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸದೇ ಹೋದಂತಹ ಸಂದರ್ಭದಲ್ಲಿ ಅರ್ಜಿದಾರರಿಗೆ ಮತ್ತು ಕುಟುಂಬದವರಿಗೆ ತುಂಬಲಾರದಂತಹ ಕಷ್ಟ ನಷ್ಟಗಳು ಮತ್ತು ಅನಾನುಕೂಲಗಳು ಉಂಟಾಗುತ್ತವೆ. ಅರ್ಜಿದಾರರು ಜಾಮೀನು ಮಂಜೂರು ಮಾಡುವ ಸಂದರ್ಭದಲ್ಲಿ ವಿಧಿಸಬಹುದಾದ ಎಲ್ಲ ಷರತ್ತುಗಳನ್ನು ಪಾಲಿಸಲು ಬದ್ಧರಿರುತ್ತಾರೆ. ಆದುದರಿಂದ ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

4. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರು ಆರೋಪಿತರ ನಿರೀಕ್ಷಣಾ ಜಾಮೀನು ಅರ್ಜಿಗೆ ತಮ್ಮ ವಿವರವಾದ ತಕರಾರುಗಳನ್ನು ಸಲ್ಲಿಸಿದ್ದು ಈ ಕೇಸಿನ ವಿದ್ಯಮಾನಗಳನ್ನು ಹೇಳಿ, ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಮೇಲ್ಕಂಡ ಆರೋಪಿತರ ಪತ್ತೆ ಕಾರ್ಯ ಕೈಗೊಂಡಿದ್ದು ಸಿಬ್ಬಂದಿಯವರನ್ನು ನೇಮಿಸಿದ್ದು, ಅರ್ಜಿದಾರ/ಆರೋಪಿತರು ಕೃತ್ಯ ನಡೆದಾಗಿನಿಂದಲೂ ತಲೆ ಮರೆಸಿಕೊಂಡಿರುತ್ತಾರೆ ತನಿಖಾಧಿಕಾರಿಗಳು ಇವರುಗಳನ್ನು ದಸ್ತಗಿರಿ ತನಿಖೆಗೊಳಪಡಿಸಬೇಕಾಗಿರುತ್ತದೆ. ಆದುದರಿಂದ ಅರ್ಜಿದಾರ/ಆರೋಪಿತರ ನಿರೀಕ್ಷಣಾ ಜಾಮೀನು ಅರ್ಜಿಯು ಊರ್ಜಿತವಾಗಿರುವುದಿಲ್ಲ. ಈವರೆಗಿನ ತನಿಖೆಯಿಂದ ಅರ್ಜಿದಾರ/1ನೇ ಆರೋಪಿತನು ಉಳಿದ ಆರೋಪಿತರ ಜೊತೆ ಸೇರಿಕೊಂಡು ಪಿರ್ಯಾದಿಯವರಿಗೆ ಸರ್ಕಾರದಿಂದ ಮಂಜೂರಾಗಿ ಪಿ.ಟಿ.ಸಿ.ಎಲ್ ಕಾಯ್ದೆಗೆ ಒಳಪಡುವ ನಮ್ಮ ಮೇಲ್ಕಂಡ ಸರ್ವೆ ನಂ.504 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 27 ಗುಂಟೆ ಜಮೀನನ್ನು ಅಕ್ರಮವಾಗಿ ಕ್ರಯ ಪತ್ರ ಮಾಡಿದಲ್ಲದೆ ಮೇಲ್ಕಂಡವರುಗಳು ಪರಸ್ಪರ ಶಾಮೀಲಾಗಿ ಸುಳ್ಳು ಕ್ರಯಪತ್ರವನ್ನು ಕಾನೂನು ಬಾಹಿರವಾಗಿ ಸೃಷ್ಟಿ ಮಾಡಿ ನಮಗೆ ಮೋಸ ವಂಚನೆ ಮಾಡಿ ಮೇಲ್ಕಂಡಂತೆ ಅಪರಾಧವೆಸಗಿರುವುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡು ಬರುತ್ತದೆ. ತನಿಖಾಧಿಕಾರಿಗಳು ತನಿಖೆಯನ್ನು ಮುಂದುವರೆಸಿದ್ದು, ಪಿರ್ಯಾದಿಯವರು ಸ್ಥಳವನ್ನು ತೋರಿಸಿದ ಮೇರೆಗೆ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪಂಚರ ಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿದ್ದು ಪ್ರಕರಣದ ತನಿಖೆಯು ಇನ್ನೂ ತನಿಖಾ ಹಂತದಲ್ಲಿದ್ದು, ತನಿಖಾಧಿಕಾರಿಗಳು ಕೆಲವು ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿದ್ದು, ಇನ್ನೂ ಹೆಚ್ಚಿನ ಸಾಕ್ಷಿದಾರರ ಹೇಳಿಕೆಯನ್ನು ಪಡೆಯಬೇಕಾಗಿರುತ್ತದೆ ಹಾಗೂ ಜಮೀನಿಗೆ ಸಂಬಂಧಿಸಿದ ಮಹತ್ವದ ದಾಖಲಾತಿಗಳನ್ನು ಸಂಗ್ರಹಿಸಬೇಕಾಗಿರುತ್ತದೆ ಅಲ್ಲದೇ ಪಿರ್ಯಾದಿ ಮತ್ತು

ಆರೋಪಿತರ ಜಾತಿ ದೃಢೀಕರಣ ಪತ್ರ ಹಾಗೂ ಕೃತ್ಯ ನಡೆದ ನಕಾಶೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದುಕೊಳ್ಳಬೇಕಾಗಿರುತ್ತದೆ. ಈ ಹಂತದಲ್ಲಿ ಅರ್ಜಿದಾರ/ಆರೋಪಿತರು ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಿರುವುದಿಲ್ಲ. ಆರೋಪಿತರು ಎಸಗಿರುವ ಕೃತ್ಯವು ಗಂಭೀರ ಸ್ವರೂಪದ್ದಾಗಿದ್ದು, ಜಾಮೀನು ರಹಿತವಾಗಿದ್ದು, 7 ವರ್ಷಗಳಿಗೆ ಕಡಿಮೆ ಇಲ್ಲದಂತೆ ಆದರೆ ಜೀವಾವಧಿ ಶಿಕ್ಷೆಯವರೆಗೆ ವಿಸ್ತರಿಸಬಹುದಾದ ಸಜೆ ಮತ್ತು ದಂಡವನ್ನು ವಿಧಿಸಬಹುದಾದ ಅಪರಾಧವಾಗಿರುತ್ತದೆ. ಅರ್ಜಿದಾರ/ಆರೋಪಿತರು ಕೃತ್ಯ ನಡೆದಾಗಿನಿಂದಲೂ ತಲೆ ಮರೆಸಿಕೊಂಡಿರುವುದರಿಂದ ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಾಗಿರುವುದಿಲ್ಲ. ಈ ಪ್ರಕರಣದಲ್ಲಿ ಪಿರ್ಯಾದಿಯವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಅರ್ಜಿದಾರ/ಆರೋಪಿಗಳು ಲಿಂಗಾಯಿತ ಜಾತಿಗೆ ಸೇರಿದವರಾಗಿದ್ದು, ಆರ್ಥಿಕವಾಗಿ ಪ್ರಬಲರಾಗಿದ್ದು ಸದರಿಯವರಿಗೆ ನಿರೀಕ್ಷಣಾ ಜಾಮೀನು ನೀಡಿದ್ದಲ್ಲಿ ಇವರು ಮತ್ತೆ ಪಿರ್ಯಾದಿಯವರ ಜೊತೆ ಜಗಳ ತೆಗೆದು ಬೆದರಿಕೆ ಹಾಕುವ ಹಾಗೂ ಗ್ರಾಮದಲ್ಲಿ ಕೋಮುಸೌಹಾರ್ದತೆ ಉಂಟಾಗಿ ಗಲಾಟೆ ಸಂಭವವಿದ್ದು, ಹಾಗೂ ಗ್ರಾಮದಲ್ಲಿ ಶಾಂತಿಸುವ್ಯಸ್ಥೆಗೆ ಧಕ್ಕೆಯನ್ನುಂಟುಮಾಡುವ ಎಲ್ಲಾ ಸಾಧ್ಯತೆಗಳಿರುತ್ತವೆ. ಆದುದರಿಂದ ಅರ್ಜಿದಾರ/ಆರೋಪಿತರು ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯು ಊರ್ಜಿತವಾಗಿರುವುದಿಲ್ಲ. ಈ ಹಂತದಲ್ಲಿ ಈ ಅರ್ಜಿದಾರ/ಆರೋಪಿತರನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಟ್ಟಲ್ಲಿ ಇವರುಗಳು ಮತ್ತೆ ಪಿರ್ಯಾದಿ ಹಾಗೂ ಸಾಕ್ಷಿದಾರರನ್ನು ಹೆದರಿಸಿ, ತಲೆಮರೆಸಿಕೊಂಡು ಪರಾರಿಯಾಗುವ, ಸಾಕ್ಷ್ಯಧಾರಗಳನ್ನು ನಾಶಪಡಿಸುವ ಹಾಗೂ ಮತ್ತೆ ಇಂತಹದ್ದೇ ಕೃತ್ಯವನ್ನು ಮುಂದುವರಿಸುವ ಎಲ್ಲಾ ಸಾಧ್ಯತೆಗಳಿರುತ್ತವೆ ಹಾಗೂ ಬೇರೆ ರಾಜ್ಯದ ಕಡೆ ಹೋಗಿ ತಲೆ ಮರೆಸಿಕೊಂಡು ಪಾರಾರಿಯಾಗುವ ಎಲ್ಲಾ ಸಾಧ್ಯತೆಗಳಿರುತ್ತವೆ. ಆದುದರಿಂದ ಅರ್ಜಿದಾರ/ಆರೋಪಿತರ ನಿರೀಕ್ಷಣಾ ಜಾಮೀನು ಅರ್ಜಿಯು ಊರ್ಜಿತವಾಗಿರುವುದಿಲ್ಲ. ಅರ್ಜಿದಾರ/ಆರೋಪಿತರ ವಿರುದ್ಧದ ಆಪಾಧನೆಗಳು ಗಂಭೀರ ಸ್ವರೂಪದ್ದಾಗಿದ್ದು, ಜಾಮೀನು ರಹಿತವಾಗಿದ್ದು, ಅರ್ಜಿದಾರ/ಆರೋಪಿತರು ನಿರೀಕ್ಷಣಾ ಜಾಮೀನು ಕೋರಿ ಯಾವುದೇ ಸಕಾರಣಗಳನ್ನು ನೀಡಿರುವುದಿಲ್ಲ. ಅರ್ಜಿದಾರ/ಆರೋಪಿತರು ತಮ್ಮ ನಿರೀಕ್ಷಣಾ ಜಾಮೀನು ಅರ್ಜಿಯಲ್ಲಿ ಕಾಣಿಸಿರುವ ವಿವರಗಳು ನಿಜವಿರುವುದಿಲ್ಲ ಹಾಗೂ ತಮ್ಮ ನಿರೀಕ್ಷಣಾ ಜಾಮೀನು ಅರ್ಜಿಯಲ್ಲಿ ಕಾಣಿಸಿರುವಂತಹ ಎಲ್ಲಾ ಕಾರಣಗಳು ಸತ್ಯಕ್ಕೆ ದೂರವಾಗಿದ್ದು, ಅವುಗಳನ್ನು ಕೇವಲ ತಮ್ಮನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಸೃಷ್ಟಿಸಿದಂತಹ ಸುಳ್ಳು

ಕಾರಣಗಳಾಗಿದ್ದು, ಸದರಿ ಕಾರಣಗಳನ್ನು ಅಭಿಯೋಜನಾ ಪಕ್ಷವು ಖಡಾಖಂಡಿತವಾಗಿ ನಿರಾಕರಿಸುತ್ತದೆ. ಆದುದರಿಂದ ಆರೋಪಿತರು ಜಾಮೀನು ಅರ್ಜಿಯು ಊರ್ಜಿತವಾಗಿರುವುದಿಲ್ಲ ಹಾಗೂ ಈ ಹಂತದಲ್ಲಿ ಅರ್ಜಿದಾರರು/ಆರೋಪಿತರು ಜಾಮೀನು ಪಡೆಯಲು ಅರ್ಹರಿರುವುದಿಲ್ಲ. ಆದ್ದರಿಂದ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

**5. ಉಭಯೇತರ ವಾದಗಳನ್ನು ಆಲಿಸಲಾಯಿತು.**

**6. ಪ್ರಕರಣದ ತೀರ್ಮಾನಕ್ಕಾಗಿ ಈ ಕೆಳಕಂಡ ವಿಷಯಗಳನ್ನು ಗಣನೆಗೆ ತಗೆದುಕೊಳ್ಳಲಾಯಿತು.**

1. ಆರೋಪಿತರು/ ಅರ್ಜಿದಾರರು ಜಾಮೀನು ಪಡೆಯಲು ಅರ್ಹರು ಎಂಬುದನ್ನು ಸಕಾರಣಗಳ ಮೂಲಕ ಸಾಭೀತುಪಡಿಸುವರೇ?
2. ಏನು ಆದೇಶ ?

**7. ಮೇಲ್ಕಂಡ ಪ್ರಶ್ನೆಗಳಿಗೆ ಈ ಕೆಳಂಡಂತೆ ಉತ್ತರಃ**

ಅಂಶ ಸಂಖ್ಯೆ 1: ನಕಾರಾತ್ಮಕವಾಗಿ

ಅಂಶ ಸಂಖ್ಯೆ 2: ಈ ಕೆಳಕಂಡ ಅಂತಿಮ ಆದೇಶದಂತೆಃ

## ಕಾರಣಗಳು

**8. ಅಂಶ ಸಂಖ್ಯೆ 1: ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಅರ್ಜಿದಾರರ ವಿರುದ್ಧ ಎದುರುದಾರರು ಭಾರತೀಯ ದಂಡ ಸಂಹಿತೆ ಕಲಂ 191, 417, 419, 420, 468, 471 ಮತ್ತು ಎಸ್.ಸಿ/ಎಸ್.ಟಿ [ಪಿಓಎ] ಕಾಯ್ದೆ 1989 ಕಲಂ 3(1)(f) ಅಡಿಯಲ್ಲಿ ರಅಡಿಯಲ್ಲಿ ಗುನ್ನಾ ಸಂಖ್ಯೆ 167/2025 ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

9. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇಲ್ಲಂಡ ಅರ್ಜಿದಾರ/1ನೇ ಆರೋಪಿತನು ಉಳಿದ ಆರೋಪಿತರ ಜೊತೆ ಸೇರಿಕೊಂಡು ಪಿರ್ಯಾದಿಯವರಿಗೆ ಸರ್ಕಾರದಿಂದ ಮಂಜೂರಾಗಿ ಪಿ.ಟಿ.ಸಿ.ಎಲ್ ಕಾಯ್ದೆಗೆ ಒಳಪಡುವ ಮೇಲ್ಕಂಡ ಸರ್ವೆ ನಂ.504 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 27 ಗುಂಟೆ ಜಮೀನನ್ನು ಅಕ್ರಮವಾಗಿ ಕ್ರಯ ಪತ್ರ ಮಾಡಿದಲ್ಲದೆ

ಮೇಲ್ಕಂಡವರುಗಳು ಪರಸ್ಪರ ಶಾಮೀಲಾಗಿ ಸುಳ್ಳು ಕ್ರಯಪತ್ರವನ್ನು ಕಾನೂನು ಬಾಹಿರವಾಗಿ ಸೃಷ್ಟಿ ಮಾಡಿ ಪಿರ್ಯಾದಿಯವರಿಗೆ ಮೋಸ ವಂಚನೆ ಮಾಡಿ ಮೇಲ್ಕಂಡಂತೆ ಅಪರಾಧವೆಸಗಿರುವುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡು ಬರುತ್ತದೆ.

ಸದರಿ 1ನೇ ಆರೋಪಿಯ ಪರ ವಕೀಲರು ಈ ಮೇಲಿನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ ಉಲ್ಲೇಖವನ್ನು ಈ ನ್ಯಾಯಾಲಯಕ್ಕೆ ನೀಡಿದ್ದು, ಅದು ಈ ಕೆಳಕಂಡಂತೆ ಇರುತ್ತದೆ.

**In the court of Hon'ble Supreme Court of India in the case of Deepak Kumar Tala V/s State of U.P and others in Criminal Appeal No**. 1471/2025.

**In the court of Hon'ble Supreme Court of India in the case of Shajan Skaria V/s The state of Kerala and others in Criminal Appeal No**. 2622/2024(**Arising out of SLP** (**Crl**.) **No**. 8081 **of** 2023 ). ಮೇಲ್ಕಂಡ ಸದರಿ ಉಲ್ಲೇಖಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ.

ಅದರಂತೆ ಆರೋಪಿತರು ಎಸಗಿರುವ ಕೃತ್ಯವು ಗಂಭೀರ ಸ್ವರೂಪದ್ದಾಗಿದ್ದು, ಜಾಮೀನು ರಹಿತವಾಗಿದ್ದು, 7 ವರ್ಷಗಳಿಗೆ ಕಡಿಮೆ ಇಲ್ಲದಂತೆ ಆದರೆ ಜೀವಾವಧಿ ಶಿಕ್ಷೆಯವರೆಗೆ ವಿಸ್ತರಿಸಬಹುದಾದ ಸಜೆ ಮತ್ತು ದಂಡವನ್ನು ವಿಧಿಸಬಹುದಾದ ಅಪರಾಧವಾಗಿರುತ್ತದೆ. ಅಲ್ಲದೇ ತನಿಖಾಧಿಕಾರಿಗಳು ತನಿಖೆಯನ್ನು ಮುಂದುವರೆಸಿದ್ದು, ಪಿರ್ಯಾದಿಯವರು ಸ್ಥಳವನ್ನು ತೋರಿಸಿದ ಮೇರೆಗೆ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪಂಚರ ಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿದ್ದು ಪ್ರಕರಣದ ತನಿಖೆಯು ಇನ್ನೂ ತನಿಖಾ ಹಂತದಲ್ಲಿದ್ದು, ತನಿಖಾಧಿಕಾರಿಗಳು ಕೆಲವು ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿದ್ದು, ಇನ್ನೂ ಹೆಚ್ಚಿನ ಸಾಕ್ಷಿದಾರರ ಹೇಳಿಕೆಯನ್ನು ಪಡೆಯಬೇಕಾಗಿರುತ್ತದೆ ಹಾಗೂ ಜಮೀನಿಗೆ ಸಂಬಂಧಿಸಿದ ಮಹತ್ವದ ದಾಖಲಾತಿಗಳನ್ನು ಸಂಗ್ರಹಿಸಬೇಕಾಗಿರುತ್ತದೆ ಅಲ್ಲದೇ ಪಿರ್ಯಾದಿ ಮತ್ತು ಆರೋಪಿತರ ಜಾತಿ ದೃಢೀಕರಣ ಪತ್ರ ಹಾಗೂ ಕೃತ್ಯ ನಡೆದ ನಕಾಶೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದುಕೊಳ್ಳಬೇಕಾಗಿರುತ್ತದೆ. ಈ ಹಂತದಲ್ಲಿ ಅರ್ಜಿದಾರ/1ನೇ ಆರೋಪಿತರು ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಿರುವುದಿಲ್ಲ.

ಅರ್ಜಿದಾರ/ಆರೋಪಿತರು ಕೃತ್ಯ ನಡೆದಾಗಿನಿಂದಲೂ ತಲೆ ಮರೆಸಿಕೊಂಡಿರುವುದರಿಂದ ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಾಗಿರುವುದಿಲ್ಲ. ಈ ಪ್ರಕರಣದಲ್ಲಿ ಪಿರ್ಯಾದಿಯವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಅರ್ಜಿದಾರ/ಆರೋಪಿಗಳು ಲಿಂಗಾಯಿತ ಜಾತಿಗೆ ಸೇರಿದವರಾಗಿದ್ದು, ಆರ್ಥಿಕವಾಗಿ ಪ್ರಬಲರಾಗಿದ್ದು ಸದರಿಯವರಿಗೆ ನಿರೀಕ್ಷಣಾ ಜಾಮೀನು ನೀಡಿದ್ದಲ್ಲಿ ಇವರು ಮತ್ತೆ ಪಿರ್ಯಾದಿಯವರ ಜೊತೆ ಜಗಳ ತೆಗೆದು ಬೆದರಿಕೆ ಹಾಕುವ ಹಾಗೂ ಗ್ರಾಮದಲ್ಲಿ ಕೋಮುಸೌಹಾರ್ದತೆ ಉಂಟಾಗಿ ಗಲಾಟೆ ಸಂಭವವಿದ್ದು, ಹಾಗೂ ಗ್ರಾಮದಲ್ಲಿ ಶಾಂತಿಸುವ್ಯಸ್ಥೆಗೆ ಧಕ್ಕೆಯನ್ನುಂಟುಮಾಡುವ ಎಲ್ಲಾ ಸಾಧ್ಯತೆಗಳಿರುತ್ತವೆ. ಆದುದರಿಂದ ಅರ್ಜಿದಾರ/ಆರೋಪಿತರು ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯು ಊರ್ಜಿತವಾಗಿರುವುದಿಲ್ಲ. ಈ ಹಂತದಲ್ಲಿ ಈ ಅರ್ಜಿದಾರ/ಆರೋಪಿತರನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಟ್ಟಲ್ಲಿ ಇವರುಗಳು ಮತ್ತೆ ಪಿರ್ಯಾದಿ ಹಾಗೂ ಸಾಕ್ಷಿದಾರರನ್ನು ಹೆದರಿಸಿ, ತಲೆಮರೆಸಿಕೊಂಡು ಪರಾರಿಯಾಗುವ, ಸಾಕ್ಷ್ಯಧಾರಗಳನ್ನು ನಾಶಪಡಿಸುವ ಹಾಗೂ ಮತ್ತೆ ಇಂತಹದ್ದೇ ಕೃತ್ಯವನ್ನು ಮುಂದುವರಿಸುವ ಎಲ್ಲಾ ಸಾಧ್ಯತೆಗಳಿರುತ್ತವೆ ಹಾಗೂ ಬೇರೆ ರಾಜ್ಯದ ಕಡೆ ಹೋಗಿ ತಲೆ ಮರೆಸಿಕೊಂಡು ಪಾರಾರಿಯಾಗುವ ಎಲ್ಲಾ ಸಾಧ್ಯತೆಗಳಿರುತ್ತವೆ. ಆದುದರಿಂದ ಅರ್ಜಿದಾರ/ಆರೋಪಿತರು ನಿರೀಕ್ಷಣಾ ಜಾಮೀನು ಕೋರಿ ಯಾವುದೇ ಸಕಾರಣಗಳನ್ನು ನೀಡಿರುವುದಿಲ್ಲ. ಅರ್ಜಿದಾರ/ಆರೋಪಿತರು ತಮ್ಮ ನಿರೀಕ್ಷಣಾ ಜಾಮೀನು ಅರ್ಜಿಯಲ್ಲಿ ಕಾಣಿಸಿರುವ ವಿವರಗಳು ನಿಜವಿರುವುದಿಲ್ಲ ಹಾಗೂ ತಮ್ಮ ನಿರೀಕ್ಷಣಾ ಜಾಮೀನು ಅರ್ಜಿಯಲ್ಲಿ ಕಾಣಿಸಿರುವಂತಹ ಎಲ್ಲಾ ಕಾರಣಗಳು ಸತ್ಯಕ್ಕೆ ದೂರವಾಗಿದ್ದು, ಅವುಗಳನ್ನು ಕೇವಲ ತಮ್ಮನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಸೃಷ್ಟಿಸಿದಂತಹ ಸುಳ್ಳು ಕಾರಣಗಳಾಗಿರುತ್ತದೆ ಎಂಬುದು ನ್ಯಾಯಾಲಯದ ಗಮನಕ್ಕೆ ಬರುತ್ತದೆ. ಅಲ್ಲದೇ ಆರೋಪಿತರ ಪರ ವಕೀಲರು ನೀಡಿರುವ ಈ ಮೇಲ್ಕಂಡ ಉಲ್ಲೇಖವು ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ. ಆದ್ದರಿಂದ ಈ ಹಂತದಲ್ಲಿ ಅರ್ಜಿದಾರರು ನ್ಯಾಯಾಲಯದಲ್ಲಿ ನಂಬಬಹುದಾದ ಅಂಶಗಳನ್ನು ಜಾಮೀನು ಮಂಜೂರು ಮಾಡಲು ನಿರೂಪಿಸಿರುವುದಿಲ್ಲ. ಆದುದರಿಂದ ಆರೋಪಿತರು ಜಾಮೀನು ಅರ್ಜಿಯು ಊರ್ಜಿತವಾಗಿರುವುದಿಲ್ಲ ಹಾಗೂ ಈ ಹಂತದಲ್ಲಿ ಅರ್ಜಿದಾರರು/ಆರೋಪಿತರು ಜಾಮೀನು ಪಡೆಯಲು ಅರ್ಹರಿರುವುದಿಲ್ಲ. ಆದ್ದರಿಂದ 1ನೇ ಅಂಶವನ್ನು ನಕಾರಾತ್ಮಕವಾಗಿ ಉತ್ತರಿಸಿದ್ದು ಇರುತ್ತದೆ.

**10. ಅಂಶ ಸಂಖ್ಯೆ 2ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಚರ್ಚಿಸಿದ ನಂತರ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

## ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿಯಲ್ಲಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ.

( ಶೀಘ್ರಲಿಗಾರರಿಗೆ ಕಂಪ್ಯೂಟರ್ ಮೂಲಕ ಉಕ್ತಲೇಖನ ನೀಡಿದ್ದು, ಬೆರಳಚ್ಚು ಮಾಡಿದ್ದು, ತಿದ್ದುಪಡಿ ಮಾಡಿ ಪುನಃ ತೆರೆದ ನ್ಯಾಯಾಲಯದಲ್ಲಿ ಘೋಷಣೆಯನ್ನು ದಿನಾಂಕ 18.09.2025 ರಂದು ಮಾಡಿರುತ್ತೇನೆ)

PRABHAVATHI G

Digitally signed by PRABHAVATHI G
Date: 2025.09.22 12:36:26 +0530

**(ಶ್ರೀಮತಿ ಪ್ರಭಾವತಿ .ಜಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ.